# HUBBALLI-DHARWAD SMART CITY LIMITED

Special Purpose Vehicle for Implementation of Smart City Projects
(Registered Company No. CIN:U74999KA2017 PLC 101265)

# ಜನತಾ ಬಜಾರ ತರಕಾರಿ ಮಾರುಕಟ್ಟೆ ಅಭಿವೃದ್ಧಿ ಯೋಜನೆ

## ವ್ಯಾಪಾರಸ್ಥರಲ್ಲಿ ಮನವಿ

ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಜನತಾ ಬಜಾರ ತರಕಾರಿ ಮಾರುಕಟ್ಟೆಯ ಕಟ್ಟಡದ ಪ್ರದೇಶವನ್ನು ನೂತನ ವಿನ್ಯಾಸದೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ಉತ್ತಮ ಸ್ಥಳಾವಕಾಶ ಇರುವ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ಕಟ್ಟಡವನ್ನು ನಿರ್ಮಿಸಲಾಗುತ್ತದೆ.

- ಕೆಳಮಹಡಿಯಲ್ಲಿ ವಾಹನ ನಿಲುಗಡೆ.
- ನೆಲ ಮಹಡಿ ಹಾಗೂ ಮೊದಲನೆ ಮಹಡಿಯಲ್ಲಿ ವ್ಯಾಪಾರ ಮಳಿಗೆ ಮತ್ತು ಉತ್ತಮ ವಿಶಾಲವಾದ ಸ್ಥಳಾವಕಾಶ ಕಲ್ಪಿಸಲಾಗುತ್ತಿದೆ.
- ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ ಒದಗಿಸಿ ಕಟ್ಟಡ ನಿರ್ಮಿಸಲಾಗುತ್ತಿದೆ.

**Ongoing Projects: Development of Core Markets(Janata Bazar Market)**

| Name of the Work | Awarded Cost | Name of the Contractor |
|---|---|---|
| **Renovation of Market: Janata Bazaar**<br>Work order Issued on: 06 Aug 2019 | 18.35 Cr | M/s SKS Karkala Infra Projects Pvt Ltd |
| **Rehabilitation of Kattas and Shops: Janata Bazaar**<br>Work Order Issued on: 06 Aug 2019 | 0.30 Cr | M/s Rio Green Environ (India) ASTS |


| Name of the Work | Awarded Cost | Name of the Contractor |
|---|---|---|
| **Renovation of Market: Janata Bazaar**<br>Work order Issued on: 06 Aug 2019 | 18.35 Cr | M/s SKS Karkala Infra Projects Pvt Ltd |




| | |
|---|---|
| Total No Of Floors | B+G+3F+T |
| Total Built Up Area (SQ MT) | 96,000 sq ft |
| Total Plot Area (SQ Mt) | 36,382 sq ft |



- ಕೆಳಮಹಡಿಯಲ್ಲಿ ಸಾರ್ವಜನಿಕರ ಮತ್ತು ವ್ಯಾಪಾಸ್ಥರ ವಾಹನಗಳಿಗೆ ಸ್ಮಾರ್ಟ ಪಾರ್ಕಿಂಗ್ ವ್ಯವಸ್ಥೆಗೆ ಸ್ಥಳಾವಕಾಶ




- ನೆಲ ಮಹಡಿಯಲ್ಲಿ ವ್ಯಾಪಾರಸ್ಥರಿಗೆ ಮಳಿಗೆಗಳು
- ಸಾರ್ವಜನಿಕರಿಗೆ ವ್ಯಾಪಾರಕ್ಕಾಗಿ ಅನುಕೂಲವಾಗುವಂತೆ ಮುಕ್ತವಾದ ಚಲನವಲನಕ್ಕೆ ಅನುಕೂಲ



- ಮೊದಲನೆ ಮಹಡಿಯಲ್ಲಿ ವಲಯ ಕಚೇರಿ ಮತ್ತು ಗ್ರಂಥಾಲಯ ಹಾಗೂ ಇತರ ಕಚೇರಿಗಳಿಗೆ ವಿಶಾಲವಾದ ಸ್ಥಳಾವಕಾಶ
- ಎರಡನೇ ಮಹಡಿಯಲ್ಲಿ ವಿಶಾಲವಾದ ಸುಸಜ್ಜಿತ ಸ್ಥಳಾವಕಾಶ




- ಮೂರನೆ ಮಹಡಿಯಲ್ಲಿ ತೆರೆದ ಮೇಲ್ಛಾವಣಿ, ಉಪಹಾರ ಗೃಹ ಮತ್ತು ಮನೋರಂಜನೆ ಚಟುವಟಿಕೆಗಳಿಗೆ ಸ್ಥಳಾವಕಾಶ



- ಈಗಾಗಲೇ ಉದ್ದೇಶಿತ ಕಟ್ಟಡದ ನಿರ್ಮಾಣವನ್ನು ಟೆಂಡರ ಆಹ್ವಾನಿಸಿ ಮೆ॥ ಎಸ್. ಕೆ. ಎಸ್ ಕಾರ್ಕಳ ಇನ್ಫ್ರಾಸ್ಟ್ರಕ್ಚರ್ ಪ್ರೊಜೆಕ್ಟ್ ಪ್ರೈ.ಲಿ., ಇವರಿಗೆ ಗುತ್ತಿಗೆಯನ್ನು ನೀಡಲಾಗಿ ಗುತ್ತಿಗೆ ಅವದಿಯನ್ನು 09 ತಿಂಗಳಿಗೆ ನಿಗದಿಪಡಿಸಿ ಮುಕ್ತಾಯಗೊಳಿಸಲು ಸೂಚಿಸಲಾಗಿರುತ್ತದೆ.
- ಉದ್ದೇಶಿತ ಜನತಾ ಬಜಾರ ಮಾರುಕಟ್ಟೆಯು ಒಂದು ಭವ್ಯವಾದ ಉತ್ತಮ ಮಾರುಕಟ್ಟೆಯಾಗಿದ್ದು, ಪ್ರಸ್ತುತ ಸದರಿ ಪ್ರದೇಶದಲ್ಲಿ ಇರುವ ವ್ಯಾಪಾರಸ್ಥರಿಗೆ ತಾತ್ಕಾಲಿಕ ವ್ಯಾಪಾರ ನಿರ್ವಹಿಸಲು ಅನುಕೂಲವಾಗುವಂತೆ ಮಹಾನಗರ ಪಾಲಿಕೆ ಕಟ್ಟಡ ಹೊಸುರು ಆವರಣದಲ್ಲಿ ಮತ್ತು ಗೋಕುಲ ರಸ್ತೆಯಲ್ಲಿರುವ ಹೊಟೆಲ್ ಕ್ಲಾರ್ಕ–ಇನ್ ಪ್ರದೇಶದ ಪಕ್ಕದಲ್ಲಿ ತಾತ್ಕಾಲಿಕ ವ್ಯಾಪಾರಕ್ಕಾಗಿ ಮೂಲಭೂತ ಸೌಕರ್ಯ ವ್ಯವಸ್ಥೆಗಳಾದ ತರಕಾರಿ ಮಾರಾಟ ಮಾಡಲು ಕಟ್ಟೆಗಳು, ಕಿರಾಣಿ ಹಾಗೂ ದಿನಸಿ ವ್ಯಾಪಾಸ್ಥರಿಗೆ ಶಟರ್ಸ್ ಸಹಿತ ಅಂಗಡಿಗಳು, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ ಹಾಗೂ ವ್ಯಾಪಾರಕ್ಕಾಗಿ ಬರುವ ನಾಗರೀಕರಿಗೆ ಸುಸೂತ್ರವಾಗಿ ವ್ಯಾಪಾರ ಮಾಡಲು ಸೌಕರ್ಯದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಈ ಯೋಜನೆಯನ್ನು ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ನಾಗರೀಕರ ಅಭಿಪ್ರಾಯ ಪಡೆದು ಕಾರ್ಯಸೂಚಿಯಲ್ಲಿ ಅಳವಡಿಸಿ ಮಂಜೂರಾತಿ ಪಡೆದುಕೊಂಡು ನಾಗರೀಕರಿಗೆ ಮತ್ತು ವ್ಯಾಪಾರಸ್ಥರಿಗೆ ಉತ್ತಮ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುತ್ತದೆ. ಉದ್ದೇಶಿತ ಮಾರುಕಟ್ಟೆಯನ್ನು ನಿರ್ಮಿಸಲು ತಮ್ಮ ಸಂಪೂರ್ಣ ಸಹಕಾರವನ್ನು ನೀಡಲು ಈ ಮೂಲಕ ಕೋರಲಾಗಿದೆ.

(ಡಾ॥ ಸುರೇಶ. ಇಟ್ನಾಳ)
ಆಯುಕ್ತರು
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

(ಸಿ. ಡಬ್ಲ್ಯೂ ಶಕೀಲ್‌ಅಹ್ಮದ)
ವ್ಯವಸ್ಥಾಪಕ ನಿರ್ದೇಶಕರು
ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಲಿ., ಹುಬ್ಬಳ್ಳಿ